ತುಂಗಭದ್ರಾ ಎಡದಂಡೆ ನಾಲೆ

74(349) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ ಸರ್ಕಾರ ಖರ್ಚು ಮಾಡಿರುವ ಮೊತ್ತವೆಷ್ಟು; (ವರ್ಷವಾರು ವಿವರಗಳನ್ನು ನೀಡುವುದು)

ಆ) ತುಂಗಭದ್ರಾ ಎಡದಂಡೆ ನಾಲೆಯು ಪದೇ ಪದೇ ದುರಸ್ತಿಗೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕಾರಣಗಳೇನು;

ಈ) ತುಂಗಭದ್ರಾ ಎಡದಂಡೆ ನಾಲೆಯನ್ನು ಸಮರ್ಪಕವಾಗಿ ನಿರ್ವಹಿಸಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಕಳೆದ ಮೂರು ವರ್ಷಗಳಲ್ಲಿ ಸಿಂಧನೂರು ತಾಲ್ಲೂಕಿನ ವ್ಯಾಪ್ತಿಯ ನಾಲೆಗೆ ಈವರೆವಿಗೂ ಖರ್ಚು ಮಾಡಿರುವ ಮೊತ್ತವೆಷ್ಟು; (ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ತುಂಗಭದ್ರಾ ಎಡದಂಡೆ ನಾಲೆಯ ದುರಸ್ತಿಗಾಗಿ ಕಳೆದ 3 ವರ್ಷಗಳಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತದ ವಿವರಗಳು ಈ ಕೆಳಗಿನಂತಿವೆ:

ವರ್ಷ	ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತ (ರೂ. ಕೋಟಿ)
2007–08	ರೂ. 19.14
2008–09	ರೂ. 7.09
2009–10	ರೂ. 291.00

ಆ) ಬಂದಿದೆ.

ಇ) ನಾಲೆಯು ಸುಮಾರು 50 ವರ್ಷಗಳಷ್ಟು ಹಳೆಯದಾಗಿದ್ದು, ಲಭ್ಯವಿದ್ದ ಮಣ್ಣಿನಿಂದ ನಿರ್ಮಿಸಲಾಗಿರುವುದರಿಂದ ಕಾಲುವೆಯಲ್ಲಿ ಪದೇ ಪದೇ ಅಲ್ಲಲ್ಲಿ breaches ಮತ್ತು bhonga ಗಳು ಉಂಟಾಗುತ್ತಿವೆ.

ಈ) ಶ್ರೀ ಹೆಚ್.ಎಸ್. ಚಿನಿವಾಲ ಕಮಿಟಿ ವರದಿಯಲ್ಲಿ ಸೂಚಿಸಿರುವ, Remedies measures ಪ್ರಕಾರ ಪ್ರತಿ ವರ್ಷ ಹಂತ ಹಂತವಾಗಿ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಉ) ಕಳೆದ 3 ವರ್ಷಗಳಲ್ಲಿ ಸಿಂಧನೂರು ವಿಭಾಗದಡಿ (ಸಿಂಧನೂರು ತಾಲ್ಲೂಕಿನಲ್ಲಿ) ತುಂಗಭದ್ರಾ ಎಡದಂಡೆ ನಾಲೆಗೆ ಖರ್ಚು ಮಾಡಿರುವ ವಿವರಗಳು ಈ ಕೆಳಗಿನಂತಿರುತ್ತವೆ:

ವರ್ಷ	ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತ (ರೂ. ಕೋಟಿ)
2007–08	ರೂ. 4.37
2008–09	ರೂ. 3.09
2009–10	ರೂ. 58.73

ಐ.ಟಿ.ಐ. ಕಾಲೇಜು ಮಂಜೂರಾತಿ

75(351) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ಮತ್ತು ಎಲ್ಲಿ ಪ್ರಾರಂಭಿಸಲಾಗುವುದು;

ಇ) ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡದೇ ಇರುವುದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸಿಂಧನೂರು ತಾಲ್ಲೂಕಿಗೆ ಈವರೆವಿಗೂ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡದೇ ಇರಲು ಸರ್ಕಾರಕ್ಕಿರುವ ತೊಂದರೆಗಳೇನು;